ಆ) ವಾರ್ಷಿಕ ಸುಮಾರು 1900 ಕೋಟಿ ರೂ.ಗಳು.

ಇ) ಸಾರಾಯಿ ನಿಷೇಧದಿಂದ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಸರ್ಕಾರಕ್ಕೆ ಬರಬೇಕಾದ ಬೇರೆ ರಾಜ್ಯಸ್ವಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಮೂಲಕ ಭರಿಸಲಾಗುವುದು.

831 (1199) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) 2006–07ನೇ ಸಾಲಿನಲ್ಲಿ ಭಾಲ್ಕಿ ತಾಲ್ಲೂಕಿನಲ್ಲಿ ವಿಧವಾ ಮತ್ತು ವೃದ್ಧಾಪ್ಯ ವೇತನವನ್ನು ಎಷ್ಟು ಜನರಿಗೆ ಮಂಜೂರು ಮಾಡಲಾಗಿದೆ;

ಆ) ವೃದ್ಧಾಪ್ಯವೇತನ ಮತ್ತು ವಿಧವಾ ವೇತನ ನೀಡುವಲ್ಲಿ ಅನುಸರಿಸುವ ಮಾನದಂಡಗಳು ಯಾವುವು;

ಇ) ವೃದ್ಧಾಪ್ಯ ವೇತನ ಮತ್ತು ವಿಧವಾ ಮಾಸಾಶನ ಪ್ರತಿ ತಿಂಗಳಿಗೆ 200.00 ರೂ ಕೊಡುತ್ತಿದ್ದು ಈಗ 400.00 ರೂ.ಗಳಿಗೆ ಹೆಚ್ಚಿಸಿರುವ ಬಗ್ಗೆ ಸರ್ಕಾರ ಆದೇಶ ಹೊರಡಿಸಿದೆಯೇ;

ಈ) ಈ ಆದೇಶವು ಯಾವಾಗಿನಿಂದ ಜಾರಿಯಲ್ಲಿದೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 2006–07ನೇ ಸಾಲಿನಲ್ಲಿ ಈ ಕೆಳಕಂಡ ಜನರಿಗೆ ವೃದ್ಧಾಪ್ಯ ವೇತನ ಮತ್ತು ವಿಧವಾ ವೇತನ ಮಂಜೂರು ಮಾಡಲಾಗಿದೆ.

ವೃದ್ಧಾಪ್ಯ ವೇತನ	ವಿಧವಾ ವೇತನ
518 ಜನರಿ	387 ಜನರಿಗೆ

ಆ) ಸರ್ಕಾರ ನಿಗದಿ ಪಡಿಸಿರುವ ಮಾನ ದಂಡಗಳು ಈ ಕೆಳಕಂಡಂತಿವೆ

ವಿಧವಾ ವೇತನ	ವೃದ್ಧಾಪ್ಯ ವೇತನ
1)ಪೋಷಿಸುವ ಗಂಡು ಮಕ್ಕಳಿರಬಾರದು	1)65 ವರ್ಷ ಮೇಲ್ಪಟ್ಟಿರಬೇಕು
2)ಪತಿಯ ಮರಣ ದೃಢೀಕರಣ ಪತ್ರ	2)ಆದಾಯವಿರಬಾರದು
3) ವಾರ್ಷಿಕ ವರದಾನ ರೂ.6000/– ಮೀರಿರಬಾರದು	3)ಗಂಡು ಮಕ್ಕಳಿರಬಾರದು
4)ಮರು ಮದುವೆ ಆಗಿರಬಾರದು	4)ಯಾರೊಬ್ಬರ ಆಶ್ರಯವಿರಬಾರದು ಹಾಗೂ ಭಿಕ್ಷುಕರಾಗಿರಬಾರದು

ಇ) ಹೌದು.

ಈ) ಈ ಆದೇಶಗಳು ದಿನಾಂಕ:1.4.2007 ರಿಂದ ಜಾರಿಯಲ್ಲಿದೆ.

832 (1200) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಭಾಲ್ಕಿ ತಾಲ್ಲೂಕಿನಲ್ಲಿ ದಿನಾಂಕ:22.06.2007 ರಂದು ಭಾರಿ ಮಳೆಯಿಂದ ಮನೆಗಳು ನೀರಿನಲ್ಲಿ ಮುಳುಗಡೆಯಾಗಿ ಬಡ ಜನರ ಜೀವನ ಅಸ್ತವ್ಯಸ್ತಗೊಂಡು ಬಹಳಷ್ಟು ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದರೆ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಈ ಬಡ ಜನರ ಮನೆಗಳು ಹಾಗೂ ಇವರ ಜೀವನ ಸುಧಾರಣೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು;

ಈ) ಹಾಗಿದ್ದಲ್ಲಿ ಇವರು ಸುಧಾರಣೆಗೆ ಯಾವಾಗ ಕ್ರಮ ಕೈಗೊಳ್ಳುವಿರಿ ಎಂಬುದನ್ನು ಸ್ಪಷ್ಟ ನಿರ್ದೇಶನದೊಡನೆ ತಿಳಿಸುವುದೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ದಿನಾಂಕ:22.6.2007 ರಂದು ಭಾಲ್ಕಿ ಪಟ್ಟಣದಲ್ಲಿ ಬಿದ್ದ ಭಾರಿ ಮಳೆಯಿಂದ ಬೀದರ್ ಬೇಸ್ ಬಡಾವಣೆ ಹಾಗೂ ದೇವಿ ಕಾಲೋನಿ ಹತ್ತಿರ ನಾಲಾ ನೀರು(ಚರಂಡಿ) ಕೇವಲ 22 ಸಾರ್ವಜನಿಕರ ಮನೆಗಳಲ್ಲಿ ನುಗ್ಗಿ ಮನೆಯಲ್ಲಿರುವ ನಿತ್ಯೋಪಯೋಗಿ ವಸ್ತುಗಳಿಗೆ ಮಾತ್ರ ಹಾನಿಯಾಗಿರುತ್ತದೆ. ಈ ಪೈಕಿ 3 ಮನೆಗಳು ಮಾತ್ರ ಭಾಗಶಃ ಬಿದ್ದಿರುತ್ತವೆ.

ಆ) ಮನೆಗಳ ಹಾನಿಗಳ ಬಗ್ಗೆ ತಹಶೀಲ್ದಾರ್ ಸಮೀಕ್ಷೆ ನಡೆಸುತ್ತಿದ್ದು, ವರದಿ ಬಂದ ತಕ್ಷಣ ಪರಿಹಾರ ನೀಡಲಾಗುವುದು. ತುರ್ತು ಪರಿಹಾರ ನೀಡಲು ಮತ್ತು ಪರಿಹಾರ ಕಾರ್ಯ ಕೈಗೊಳ್ಳಲು ಬೀದರ್ ಜಿಲ್ಲೆಗೆ ಸರ್ಕಾರದಿಂದ ರೂ.50.00 ಲಕ್ಷ ಬಿಡುಗಡೆ ಮಾಡಲಾಗಿದೆ.

ಇ) ಕೇಂದ್ರ ಸರ್ಕಾರ ನಿಗದಿಪಡಿಸಿದ ಪ್ರಕೃತಿ ವಿಕೋಪ ಮಾರ್ಗಸೂಚಿಗಳಂತೆ ಮನೆಹಾನಿಗೆ ಪರಿಹಾರ ನೀಡಲಾಗುವುದು.

ಈ) ಪರಿಹಾರ ಧನ ವಿತರಿಸಲಾಗುವುದು.

834 (1189) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳು ಯಾವುವು;

ಆ) ಈ ಕಾರ್ಖಾನೆಗಳಲ್ಲಿನ ಉತ್ಪನ್ನಗಳ ವಿವರ ನೀಡುವುದು;

ಇ) ಈ ಕಾರ್ಖಾನೆಗಳ ಕಳೆದ ಮೂರು ವರ್ಷಗಳಲ್ಲಿನ ಲಾಭ–ನಷ್ಟಗಳ ವಿವರ ನೀಡುವುದು;